ಉಪಾಧ್ಯಕ್ಷರು.—ತಮಗೆ ಉತ್ತರ ತರಿಸಿಕೊಡುವ ವ್ಯವಸ್ಥೆ ಮಾಡುತ್ತಾರೆ.

ಶ್ರೀ ಆರ್. ಎನ್ ನಾಯಕ್. ಅವರ ಹತ್ತಿರ ಉತ್ತರ ಇದ್ದರೆ ಅವರು ಅದನ್ನು ಓದಲಿ. ಮಾನ್ಯ ಉಪಾಧ್ಯಕ್ಷರೇ ಇದರ ಬಗ್ಗೆ ತಾವು ಕಾಳಜಿ ವಹಿಸಬೇಕು. ಸದನ ಇರುವುದು ಆರು ದಿವಸ, ಮೊದಲು ಹೇಳಿದಹಾಗೆ ಈಗಲೂ ಹೇಳುತ್ತಿದ್ದಾರೆ,

ಉಪಾಧ್ಯಕ್ಷರು.—ತಮಗೆ ಉತ್ತರ ತರಿಸಿಕೊಡುತ್ತಾರೆ.

(ಳ) ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ಮೇಲೆ ದಬ್ಬಾಳಿಕೆ ನಡೆಸುವ ವ್ಯಕ್ತಿಗಳ ವಿರುದ್ಧ ಕ್ರಮ ತೆಗೆದುಕೊಳ್ಳುವುದು.

ಶ್ರೀ ಕೆ ಕುಶಾಲ (ಸುಳ್ಯ).—ಮಾನ್ಯ ಅಧ್ಯಕ್ಷರೇ, ಬೆಳಗಾಂ ಜಿಲ್ಲೆಯ ಬೆಂಡೀಗೆರೆ ಗ್ರಾಮದಲ್ಲಿ ಪರಿಶಿಷ್ಟ ಜಾತಿ ಮತ್ತು ಪಂಗಡದವರಿಗೆ ಐದು ಜನರಿಗೆ, ಹದಿಮೂರು ಜನ ಸವರ್ಣೀಯರು ಸೇರಿ ಕೊಂಡು ಮಲ ತಿನ್ನಿಸಿ, ಮಾನವ ಕುಲಕ್ಕೆ ಅಪಮಾನವನ್ನು ಉಂಟು ಮಾಡಿದ್ದಾರೆ, ಈ ಪ್ರಕರಣದಲ್ಲಿ ಐದು ಜನ ಸರಕಾರಿ ನೌಕರರು ಶಾಮೀಲಾಗಿದ್ದುದು ತಿಳಿದು ಬರುತ್ತದೆ. ಕೆಲವು ಪರಿಶಿಷ್ಟ ಜಾತಿ, ಪಂಗಡದ ಮಹಿಳೆಯರನ್ನು ಬೆತ್ತಲೆ ಮೆರವಣಿಗೆ ಮಾಡಿರುವುದು ತಿಳಿದು ಬರುತ್ತದೆ. ಮತ್ತು ಗುಲ್ಬರ್ಗಾ ಜಿಲ್ಲೆಯಲ್ಲಿ ಜಿಲ್ಲಾ ಪರಿಷತ್ ಸದಸ್ಯ ಶ್ರೀ ಲಕ್ಷ್ಮಣ ನಾಯಕ್ ಕೊಲೆಯು ಪೋಲೀಸರ ಸಮ್ಮುಖದಲ್ಲಿ ನಡೆದಿರುವುದರಿಂದ ಇದರಲ್ಲಿ ರಾಜಕೀಯ ಕುತಂತ್ರ ನಡೆದಿದೆ ಎಂದು ಸ್ಪಷ್ಟವಾಗಿದೆ. ಈ ಮಲ ತಿನ್ನಿಸಿದ ಪ್ರಕರಣದಲ್ಲಿ ಒಂದು ಸಮಿತಿ ರಚಿಸಲಾಗಿತ್ತು ಈ ಸಮಿತಿಯು ಏನು ವರದಿ ಒಪ್ಪಿಸಿದೆ, ಸರಕಾರ ಏನು ಕ್ರಮ ನಡೆಸಿದೆ. ಇದು ಯಾವ ಹಂತವನ್ನು ತಲುಪಿದೆ ? ಈ ಮಲ ತಿನ್ನಿಸಿದ ನೌಕರರನ್ನು ಸರಕಾರಿ ನೌಕರಿಯಿಂದ ಅಮಾನತ್ತು ಇಡಲಾಗಿದೆಯೇ ? ಈ ನೌಕರರನ್ನು ವಜಾಗೊಳಿಸುವುದು ಮತ್ತು ಇವರ ಮೇಲೆ ಪುಂಡುಗಂದಾಯ ವಿಧಿಸಿ ಪಂತದಾನದ ಹಕ್ಕನ್ನು ರದ್ದು ಪಡಿಸಿ, ರಾಜ್ಯದಿಂದ ಗಡಿಪಾರು ಮಾಡುವಂತಾಗಬೇಕು. ಮಹಿಳೆಯರನ್ನು ಬೆತ್ತಲೆ ಮೆರವಣಿಗೆ ಮಾಡಿದವರ ವಿರುದ್ಧ ಕ್ರಮ ಕೈಗೊಳ್ಳಬೇಕು. ಮತ್ತು ಶ್ರೀ ಲಕ್ಷ್ಮಣ ನಾಯಕರ ರಾಜಕೀಯ ಕೊಲೆಯಲ್ಲಿ ಶಾಮೀಲಾದವರ ವಿರುದ್ಧ ತನಿಖೆ ನಡೆಸಬೇಕೆಂದು ಹಾಗೂ ಕ್ರಮಗೊಳ್ಳುವಂತೆಯೂ ಸರಕಾರವನ್ನು ಒತ್ತಾಯಿಸುತ್ತೇನೆ.

ಶ್ರೀ ಎಂ. ರಘುಪತಿ (ವಿಧಾನಗಾರಿಕೆ ಮತ್ತು ಬಂದರು ಖಾತೆ ಸಚಿವರು).—ಮಾನ್ಯ ಅಧ್ಯಕ್ಷರೇ, ನಿಯಮ ೬೮ ರಲ್ಲಿ ಇದರ ಬಗ್ಗೆ ಡಿಸ್ಕಷನ್‌ಗೆ ಪರ್ಮಿಟ್ ಮಾಡುತ್ತೇನೆಂದು ತಾವು ಹೇಳಿದ್ದಿರಿ, ಆ ಸಂದರ್ಭದಲ್ಲಿ ಈ ವಿಷಯವನ್ನೂ ತೆಗೆದುಕೊಂಡು ಚರ್ಚೆ ಮಾಡಬಹುದು. ಇದೂ ಅದಕ್ಕೆ ಸಂಬಂಧಪಟ್ಟ ವಿಷಯ.

(ಱ) ಗುರುಪುರ ನೇತ್ರಾವತಿ ನದಿಗಳು ಸಮುದ್ರಕ್ಕೆ ಸೇರುವ ಜಾಗದಲ್ಲಿ ಹೂಳು ತೆಗೆಸುವುದು.

ಶ್ರೀ ಬ್ಲೇಸಿಯಸ್ ಎಂ. ಡಿಸೋಜಾ (ಮಂಗಳೂರು).—ಮಾನ್ಯ ಅಧ್ಯಕ್ಷರೇ, ಮಂಗಳೂರಿನಲ್ಲಿ ಗುರುಪುರದ ನೇತ್ರಾವತಿ ನದಿಗಳು ಸಮುದ್ರಕ್ಕೆ ಸೇರುವಲ್ಲಿ ಅನೇಕ ವರ್ಷಗಳಿಂದ ಮರಳು ತುಂಬಿದ್ದು ದರಿಂದ ವಿಮಾನಗಾರಿಕೆಯ ಅನೇಕ ಯಾಂತ್ರಿಕ ದೋಣಿಗಳಿಗೆ ಹಾನಿಯಾಗಿದೆ. ಜೀವಹಾನಿ ಕೂಡಾ ಆಗಿದೆ. ಈ ಸಂಗಮದಲ್ಲಿ ಹೂಳೆತ್ತಬೇಕು, ಇದಕ್ಕಾಗಿ ಅನೇಕ ವರ್ಷಗಳಿಂದ ಸಾರ್ವಜನಿಕರ ಬೇಡಿಕೆ, ಮೀನುಗಾರರ ಪ್ರಾರ್ಥನೆ. ಶಾಸಕರ ನಿರಂತರ ಒತ್ತಾಯ ಮಾಡುತ್ತಿದ್ದರೂ ಎಲ್ಲವೂ ಗೋರ್ಕಲ್ಲ ಮೇಲೆ ಮಳೆ ಸುರಿದಂತೆ ವ್ಯರ್ಥ ಆಗಿದೆ. ಡ್ರೆಜ್ಜರ್ ತರಿಸಿ ಕೂಡಲೇ ಹೂಳೆತ್ತಲು ಕ್ರಮ ಕೈಗೊಳ್ಳಬೇಕು. ಈ ರೀತಿ ಕ್ರಮ ಕೈಗೊಳ್ಳುವುದಾಗಿ ಹಿಂದೆ ಸಚಿವ ಬೈರೇಗೌಡರು ಹೇಳಿದ್ದರು. ಅದನ್ನೇ ಮತ್ತೊಮ್ಮೆ ಹೇಳಿದರು ಮಾನ್ಯ ಸಚಿವರಾದ ಕೃಷ್ಣಾರೆಡ್ಡಿಯವರು. ತಿರುಗಿ ಹೇಳಿದ್ದಾರೆ ಮಂತ್ರಿ ರಘುಪತಿಯವರು ಇತ್ತೀಚೆಗೆ ಮಂಗಳೂರಿನಲ್ಲಿ ಇದೇ ಜನವರಿ ೧೦ ರ ಒಳಗೆ ಹೂಳೆತ್ತುವ ಕಾರ್ಯ ಆರಂಭ ಮಾಡುವು ದಾಗಿ ಹೇಳಿದ್ದರೂ ಕೆಲಸ ಪ್ರಾರಂಭ ಆಗಿಲ್ಲ. ಆದ್ದರಿಂದ ವಿಧಾನಸಭೆಯಲ್ಲಿ ಈ ಹುಸಿ ಆಶ್ವಾಸನೆಗಳ ಉರುಳುಗಳನ್ನು ಪುನಃ ಎತ್ತಬೇಕಾಗಿದೆ. ಸರಕಾರ ಕೂಡಲೇ ಕಾರ್ಯಕ್ರಮ ಕೈಗೊಳ್ಳದಿದ್ದಲ್ಲಿ ಮೀನು

ಗಾರ ಸಮುದಾಯದ ಬದುಕಿಗೆ ಬರೆ ಎಳೆದಂತೆ ಆಗುತ್ತದೆ. ಸೂಕ್ತ ಕ್ರಮಕ್ಕಾಗಿ ಬರೀ ಭರವಸೆ ಬಿಲ್ಲ, ಆಡಿದಂತೆ ಮಾಡಿ ತೋರಿಸಬೇಕು ಎಂದು ಒತ್ತಾಯಿಸುತ್ತೇನೆ.

(ಅಧ್ಯಕ್ಷರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

ಶ್ರೀ ಎಂ. ರಘುಪತಿ.—(ಮಾನ್ಯ ಮಿನುಗಾರಿಕೆ ಮತ್ತು ಬಂದರು ಸಚಿವರು) ಮಾನ್ಯ ಅಧ್ಯಕ್ಷರೇ ಈಗ ನನ್ನ ಬಳಿ ಲಿಖಿತ ಮೂಲಕದ ಉತ್ತರದ ಪ್ರತಿಗಳು ಇಲ್ಲ. ಆದ್ದರಿಂದ ಹಾಗೇಯೇ ಉತ್ತರ ಹೇಳಿಬಿಡುತ್ತೇನೆ. ಮಾನ್ಯ ಅಧ್ಯಕ್ಷರೇ ಮಾನ್ಯ ಸದಸ್ಯರು ಪ್ರಸ್ತಾವ ಮಾಡಿದ ವಿಷಯದ ಬಗ್ಗೆ ಎರಡೆ ರಡು ಮಾದಗಳು ಇಲ್ಲವೇ ಇಲ್ಲ. ಇವನ್ನು ಸರಿ ಮಾಡಲೇಬೇಕು ಮಿನುಗಾರರಿಗೆ ಸಹಾಯ ಮಾಡಬೇಕು ಎನ್ನುವುದರಲ್ಲಿ ಎರಡು ಮಾದ ಇಲ್ಲವೇ ಇಲ್ಲ. ಈ ಬಗ್ಗೆ ನಾನು ಸಹ ಭರವಸೆಯನ್ನು ಕೊಟ್ಟಿದ್ದೇನೆ. ಇವೆಲ್ಲವನ್ನೂ ಎಂದರೆ ಫಿಶಿಂಗ್ ಕಾರ್ಪೊರೇಷನ್ ಆಫ್ ಇಂಡಿಯಾದವರನ್ನು ಕೇಳಿಕೊಂಡಿವೆ. ಈ ಡ್ರಜಿಂಗ್ ಮೆಷಿನ್ ಖಾಸಗೀಯವರಲ್ಲಿ ಮತ್ತು ಡ್ರಜಿಂಗ್ ಕಾರ್ಪೊರೇಷನ್ ಆಫ್ ಇಂಡಿಯಾದವರ ಬಳಿ ಇದೆ. ಈ ಬಗ್ಗೆ ನಾವು ಒಂದು ಟೆಂಡರ್ ಕರೆದಿದ್ದು ಟೆಂಡರನ್ನು ಬೋಸ್ ಕಂಪನಿಯವರು ತೆಗೆದುಕೊಂಡಿದ್ದಾರೆ ಮತ್ತು ನವಮಂಗಳೂರು ಬಂದರಿನ ಬಳಿ ಒಂದು ಖಾಸಗಿ ಡ್ರಜ್ಜರ್ ಇದೆ ಎಂದು ತಿಳಿಯಿತು. ಅವರನ್ನು ಸಹ ನಾನು ಕರೆಯಿಸಿ ಚರ್ಚೆ ಮಾಡಿದ್ದೇನೆ. ಈ ಬಗ್ಗೆ ನಾನು ಪ್ರಾಮಾಣಿಕವಾದ ಪ್ರಯತ್ನ ಮಾಡುತ್ತಿದ್ದೇನೆ. ಇನ್ನು ಕೆಲವು ದಿವಸಗಳ ಕಾಲ ಮರಳಿ ತೆಗೆಯುವುದಕ್ಕೆ ಕಷ್ಟವಾಗುತ್ತದೆ. ಈ ಬಗ್ಗೆ ನಾನು ಕೇಂದ್ರ ಸರ್ಕಾರದ ಮಂತ್ರಿಗಳ ಜೊತೆ ಯಲ್ಲಿ ಇತ್ತೀಚೆಗೆ ದೆಲ್ಲಿಗೆ ಹೋಗಿದ್ದಾಗ ಕೂಲಂಕಷವಾಗಿ ಚರ್ಚೆ ಮಾಡಿದ್ದೇನೆ. ಅವರು ಸಹ ಹೇಳಿದರು ನಾನು ಡ್ರಜಿಂಗ್ ಕಾರ್ಪೊರೇಷನ್ ಆಫ್ ಇಂಡಿಯಾದವರಿಗೆ ಹೇಳುತ್ತೇನೆಂದು ಡ್ರಜಿಂಗ್ ಕಾರ್ಪೊರೇಷನ್‌ನ ಛೇರ್ಮನ್‌ರವರನ್ನು ಕರೆಯಿಸಿ ಚರ್ಚೆ ಮಾಡಿದಾಗ ಅವರು ಹೇಳಿದರು ಈ ಕೆಲಸ ವನ್ನು ಸ್ವಲ್ಪ ಕಾಲ ಲಿಂಕ್ ಟೈ ಆಪ್ ಮಾಡಿಕೊಳ್ಳುವುದಕ್ಕೆ ಪ್ರಯತ್ನ ಮಾಡೋಣ ಎಂದು. ಆಮೇಲೆ ಈ ಬಗ್ಗೆ ನಾವು ಒಂದು ಸಮಿತಿಯನ್ನು ರಚನೆ ಮಾಡಿದ್ದೇವೆ ಈ ಸಮಿತಿಯಲ್ಲಿ ಲೋಕೋಪಯೋಗಿ ಕಾರ್ಯದರ್ಶಿಗಳು, ಮಿನುಗಾರಿಕೆ ಇಲಾಖೆಯ ನಿರ್ದೇಶಕರು, ಮತ್ತು ಡ್ರಜಿಂಗ್ ಕಾರ್ಪೊರೇಷನ್ ಆಫ್ ಇಂಡಿಯಾದ ಛೇರ್ಮನ್‌ರವರು ಇದ್ದಾರೆ. ಅವರು ಈಗಾಗಲೇ ಎರಡು ಸಲ ಮಂಗಳೂರು ಬಂದರಿಗೆ ಭೇಟಿ ಮಾಡಿ ಒಂದು ವರದಿಯನ್ನು ಕೊಟ್ಟಿ ದ್ದಾರೆ ಇದು ಹಲವಾರು ವರ್ಷಗಳ ಸಮಸ್ಯೆ ಈ ಸಮಸ್ಯೆಯನ್ನು ಪರಿಹರಿಸಲು ಸುಮಾರು ೧೨ ಕೋಟಿ ರೂಪಾಯಿಗಳ ಒಂದು ಯೋಜನೆಯನ್ನು ತಯಾರು ಮಾಡಿ ಈ ಕೆಲಸವನ್ನು ಕಾರ್ಯಗತ ಮಾಡ ಬೇಕಾಗುತ್ತದೆ. ಈ ಕೆಲಸವನ್ನು ಎಷ್ಟು ಬೇಗ ಮಾಡಲು ಸಾಧ್ಯವಾಗುತ್ತದೆಯೋ ಅಷ್ಟು ಬೇಗ ಮಾಡುವಂತೆ ಡ್ರಜಿಂಗ್ ಕಾರ್ಪೊರೇಷನ್ ಆಫ್ ಇಂಡಿಯಾದವರಿಗೆ ಮತ್ತು ಬೋಸಸ್ ಕಂಪನಿ ಯವರಿಗೆ ಹೇಳಿದ್ದೇನೆ. ಈ ಬಗ್ಗೆ ನಾನು ಪ್ರಾಮಾಣಿಕ ಪ್ರಯತ್ನ ಮಾಡುತ್ತೇನೆ.

6. ಮಂಗಳೂರಿನ ನದಿ ಮುಖ ಮತ್ತು ಕಾಲುವೆ ಹಾಗೂ ಮಲ್ಪೆ ಮಿನುಗಾರಿಕೆ ಬಂದರಿನಲ್ಲಿ ಹೂಳೆತ್ತುವ ಕಾರ್ಯವನ್ನು ಹಂತ ಹಂತವಾಗಿ ಮಾಡುವುದು.

ಶ್ರೀ ಬಿ. ಎಂ. ಇದಿನಬ್ಬ.—ಮಾನ್ಯ ಅಧ್ಯಕ್ಷರೇ. ಮಂಗಳೂರಿನ ನದಿಮುಖ ಮತ್ತು ಕಾಲುವೆ ಹಾಗೂ ಮಲ್ಪೆ ಮಿನುಗಾರಿಕಾ ಬಂದರಿನ ಇಲ್ಲಿ ಹೂಳೆತ್ತುವ ಕಾರ್ಯ ಸುದೀರ್ಘ ಕಾಲದಿಂದ ಕೇಳಿಕೆ ಯಾಗಿಯೇ ಉಳಿದಿದೆ. ಮಿನುಗಾರಿಕೆಗೆ ಇದರಿಂದಾಗಿ ಅಪಾರ ಹಾನಿ ಒದಗಿರುತ್ತದೆ. ಈ ಹೂಳೆತ್ತುವ ಕಾರ್ಯ ಯಾವಾಗ ಪ್ರಾರಂಭಿಸಿ ಪೂರ್ತಿಯಾಗುತ್ತದೆ ? ಸಮಿತಿಯನ್ನು ವಿಸರ್ಜಿಸಿ. ಕಾಪು ಕುಂದಾಪುರ ಕೋಡಿ, ಹಂಗಾರಕಟ್ಟೆ ಉಳ್ಳಾಲ ಮತ್ತು ಶಿರೂರು ಮೊದಲಾದ ಸ್ಥಳಗಳನ್ನು ದೀರ್ಘಾವಧಿಗೆ ತಂಗುವ ಕೇಂದ್ರಗಳನ್ನಾಗಿ ಅಭಿವೃದ್ಧಿಗೊಳಿಸುವುದು ಅತೀ ಅಗತ್ಯವಾಗಿರುತ್ತದೆ. ಈ ಕಾರ್ಯವನ್ನು ಹಂತ ಹಂತವಾಗಿ ಮಾಡಿ ಮುಗಿಸಿದರೆ ಕರಾವಳಿಯ ಮಿನುಗಾರಿಕೆಗೆ ತುಂಬಾ ಉಪಕಾರವಾಗುವುದು ಈ ಕುರಿತು ಮಿನುಗಾರಿಕಾ ಸಚಿವರ ಗಮನವನ್ನು ಸೆಳೆಯಬಯಸುತ್ತೇನೆ.

ಶ್ರೀ ಎಂ. ರಘುಪತಿ.—ಮಾನ್ಯ ಅಧ್ಯಕ್ಷರೇ ಮಾನ್ಯ ಸದಸ್ಯರು ಹೇಳಿದ್ದನ್ನು ನಾನು ಸಂಪೂರ್ಣ ವಾಗಿ ಒಪ್ಪಿಕೊಳ್ಳುತ್ತೇನೆ. ಹಂತ ಹಂತವಾಗಿ ಮಿನುಗಾರಿಗೆ ಸಹಾಯ ಮಾಡಬೇಕಾಗುತ್ತದೆ, ನಮ್ಮ ಕಾರ್ಯಕ್ರಮದ ಪಟ್ಟಿಯಲ್ಲಿ ಸೇರಿಸಿಕೊಂಡು ಹಂತ ಹಂತವಾಗಿ ಪ್ರಯತ್ನ ಮಾಡುತ್ತೇನೆ.